# ***4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು***

**ಎಸ್‌ಸಿ. 102/2023**

| | | | |
|---|---|---|---|
| **ಸಾಕ್ಷಿದಾರರ ಹೆಸರು** | ಃ ಶ್ರೀ ರಾಜ್ ಕುಮಾರ್ | ಪ್ರಮಾಣ ಮಾಡಿಸಿದ ದಿನಾಂಕಃ | |
| **ತಂದೆ/ಗಂಡನ ಹೆಸರು** | ಃ ಶ್ರೀ ಅಣ್ಣಿಸಮಾಚಾರ್ | **22.01.2025** | |
| **ವಯಸ್ಸು** | ಃ **63** ವರ್ಷ | | |
| **ವೃತ್ತಿ** | ಃ ನಿವೃತ್ತ ಸಹಾಯಕ ಇಂಜಿನಿಯರ್ | **ಪ್ರಾ.ಸಾ.** | ಃ **03** |
| **ವಾಸಸ್ಥಳ** | ಃ ಆಲನಹಳ್ಳಿ | **ಚಾ.ಸಾ.** | ಃ **14** |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

. ನಾನು *2014* ರಿಂದ *2022* ರವರೆಗೆ ಮೈಸೂರಿನ ಪಿಡಬ್ಲ್ಯೂಡಿ ಕಛೇರಿಯಲ್ಲಿ ಸಹಾಯಕ ಇಂಜಿನಿಯರ್ ಆಗಿ ಕೆಲಸ ಮಾಡಿದ್ದೇನೆ. ದಿಃ*26.10.2021* ರಂದು ಬಿಳಿಗೆರೆ ಪೋಲೀಸ್ ಠಾಣೆಯಿಂದ ಮೊ.ಸಂಖ್ಯೆ *136/2020* ರಲ್ಲಿನ ಕೃತ್ಯದ ಸ್ಥಳದ ನಕಾಶೆ ತಯಾರಿಸುವಂತೆ ಮನವಿ ಪತ್ರ ಬಂದಿತ್ತು. ಆ ಕಾಲಕ್ಕೆ ತಯಾರಿಸಲು ನನ್ನನ್ನು ನಿಯೋಜಿಸಿದ್ದರು. ಆಗ ನಾನು ದಿಃ*01.11.2021* ರಂದು ಪಿಸಿ-*215* ಇವರು ತೋರಿಸಿದ್ದ ಸ್ಥಳದ ನಕಾಶೆ ತಯಾರಿಸಿದ್ದೆ. ಅದನ್ನು ದಿಃ*03.11.2021* ಕ್ಕೆ ತನಿಖಾಧಿಕಾರಿಗೆ ಕಳುಹಿಸಿದ್ದರು. ಈಗ ನಾನು ನೋಡುತ್ತಿರುವ ನಕಾಶೆ ಅದೇ ಇದ್ದು ಅದರಲ್ಲಿ ನನ್ನ ಸಹಿ ಇದೆ. ಸದರಿ ನಕಾಶೆಯನ್ನು ನಿ.ಪಿ-*4* ಮತ್ತು ಸಹಿಯನ್ನು ನಿ.ಪಿ-*4(ಎ)* ಎಂದು ಗುರುತಿಸಿದೆ. ಈಗ ನಾನು ನೋಡುತ್ತಿರುವ ಪತ್ರ ನಕಾಶೆ ಕಳುಹಿಸಿರುವ ಬಗ್ಗೆ ಪತ್ರ ಇದೆ. ಸದರಿ ದಾಖಲೆಯನ್ನು ನಿ.ಪಿ-*4(ಬಿ)* ಎಂದು ಗುರುತಿಸಿದೆ.

**<u>ಪಾಟೀ ಸವಾಲು ಃ ಆರೋಪಿ ಪರ ವಕೀಲರಾದ ಶ್ರೀ ಎಂ.ಎಸ್ ರವರಿಂದಃ-</u>**

*2.* ಸ್ಥಳ ಪರಿಶೀಲನೆ ಬಳಿಕ ಕಛೇರಿಗೆ ಬಂದ ಬಳಿಕ ನಕಾಶೆ ತಯಾರಿಸಿದ್ದೆ. ನಾನು ಸ್ಥಳಕ್ಕೆ ಹೋಗಿಲ್ಲ ಮತ್ತು ಸ್ಥಳ ಪರಿಶೀಲನೆ ಮಾಡಿಲ್ಲ ಎಂದರೆ ಸರಿಯಲ್ಲ. ಪೊಲೀಸರ ಮಾಹಿತಿ ಮೇರೆಗೆ ಸ್ಥಳ ಪರಿಶೀಲನೆ ಮಾಡದೇ ನಕಾಶೆ ತಯಾರಿಸಿದ್ದೆ ಎಂದರೆ ಸರಿಯಲ್ಲ. ಪೊಲೀಸರಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸ್ಥಳದಲ್ಲಿ ಕಚ್ಚಾ ನಕಾಶೆ ತಯಾರಿಸಿ ನಂತರ ಕಛೇರಿಯಲ್ಲಿ ನಿ.ಪಿ–*4* ಅನ್ನು ತಯಾರಿಸಿದ್ದೇನೆ.

**ಮರು ವಿಚಾರಣೆಃ-** ಇಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸ ಇ ಎ ಒ.,

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
ಮೈಸೂರು